ಕರ್ನಾಟಕ ವಿಧಾನ ಸಭೆ

385 ಮಾನ್ಯ ಶ್ರೀ ಖಾದರ್ ಯು.ಟಿ.

ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) ಮಂಗಳೂರು ಬಂಧೀಖಾನೆಯಲ್ಲಿ ಆಗಾಗ್ಗೆ ಖೈದಿ ಖೈದಿಗಳ ನಡುವೆ ಹಾಗೂ ಖೈದಿ–ಬಂಧೀಖಾನೆ ಸಿಬ್ಬಂದಿಗಳ ನಡುವೆ ಕಾದಾಟ – ಹೊಡೆದಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

– ಹೌದು –

ಆ) ಹಾಗಿದ್ದಲ್ಲಿ, ಈ ರೀತಿಯ ಜಟಾಪಟಿಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು)?

ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ದಿನಾಂಕ:30.10.2008 ರಂದು ಸಂಜೆ ಬಂಧಿಗಳ ಬೀಗ ಮುದ್ರೆ ಮಾಡುವ ಸಮಯದಲ್ಲಿ ಕರ್ತವ್ಯದಲ್ಲಿದ್ದ ವಾರ್ಡರ್ ಶ್ರೀ ಸಂಜೀವ ಶೆಟ್ಟಿರವರ ಕೈಯಲ್ಲಿದ್ದ ಬೀಗದ ಕೈಗಳನ್ನು ಇದೇ ಸಂಸ್ಥೆಯ ನ್ಯಾಯಾಂಗ ಬಂಧನದಲ್ಲಿದ್ದ ವಿಚಾರಣಾ ಬಂಧಿ 8457 ಸಂದೀಪ್ ಶೆಟ್ಟಿ ಮತ್ತಿತರೆ 5 ವಿಚಾರಣಾ ಬಂಧಿಗಳು ಕಸಿದುಕೊಂಡು ಸದರಿಯವರನ್ನು ದೂಡಿ, ಬೀಳಿಸಿ, ನಾಲ್ಕನೇ ನಂಬರಿನ ಸೆಲ್‌ನ ಬೀಗ ತೆಗೆದು, ಈ ಸೆಲ್‌ನಲ್ಲಿದ್ದ ವಿಚಾರಣಾ ಬಂದಿ 9221 ಮೊಹಮದ್ ರಫೀಕ್ ತಂದೆ ಅಬ್ಬಾಸ್ ಬ್ಯಾರಿ ಮತ್ತು 9222 ಫಕೀರ ಅಹಮದ್ ತಂದೆ ಇಸ್ಮಾಯಿಲ್ ರವರ ಮೇಲೆ ದಾಳಿ ಮಾಡಿ ತಲೆಗೆ ಗಾಯ ಮಾಡಿರುತ್ತಾರೆ. ತತ್ಸಂಬಂಧ ಸದರಿ ವಿಚಾರಣಾ ಬಂಧಿಗಳನ್ನು ಕಾರಾಗೃಹದ ಭದ್ರತೆಯ ದೃಷ್ಟಿಯಿಂದ ಬೇರೆ ಬೇರೆ ಕಾರಾಗೃಹಗಳಿಗೆ ವರ್ಗಾಯಿಸಲಾಗಿದೆ ಹಾಗೂ ಈ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಕಾರಾಗೃಹದ ಪ್ರಭಾರ ಅಧೀಕ್ಷಕರಾದ ಶ್ರೀ ಈಶ್ವರ್ ನಾಯಕ್, ಚೀಫ್ ಜೈಲರ್ ರವರನ್ನು ಕರ್ತವ್ಯ ಲೋಪದ ಮೇರೆಗೆ ದಿನಾಂಕ:05.11.2008 ರಂದು ನಿಲಂಬನದಲ್ಲಿಟ್ಟಿದ್ದು, ಅವರ ಸ್ಥಾನಕ್ಕೆ ಮಡಿಕೇರಿ ಜಿಲ್ಲಾ ಕಾರಾಗೃಹದಿಂದ ಓ.ಓ.ಡಿ. ಆಧಾರದ ಮೇಲೆ ಶ್ರೀ ವಿ.ಶೇಷಮೂರ್ತಿ. ಸಹಾಯಕ ಅಧೀಕ್ಷಕ, ಇವರನ್ನು ನಿಯೋಜಿಸಲಾಗಿದೆ.

ಇನ್ನು ಮುಂದೆ ಇಂತಹ ಘಟನೆಗಳು ಜರುಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹೆಚ್ಚಿನ ಭದ್ರತೆ ವ್ಯವಸ್ಥೆಯನ್ನು ಮಾಡಲಾಗಿದೆ.
ಸಂಖ್ಯೆ:ಹೆಚ್‌ಡಿ 59 ಪಿಎಆರ್‌ಎ 2009

ಸಹಿ/–
(ಉಮೇಶ್ ವಿ. ಕತ್ತಿ)
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ.ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)